2. ಹಾಗಿದ್ದಲ್ಲಿ, ಈ ರೀತಿ ಬಾಡಿಗೆ ಪಡೆಯಲಾದ ಕಾರುಗಳ ಸಂಖ್ಯೆ ಎಷ್ಟು:

3. ಈ ಕಾರುಗಳನ್ನು ಎಷ್ಟು ದಿನಗಳ ಕಾಲ ಬಾಡಿಗೆಗೆ ಪೆಡಯಾಲಿಗದೆ:

4. ಬಾಡಿಗೆಯಾಗಿ ನೀಡಿದ ಒಟ್ಟು ಮೊತ್ತವೆಷ್ಟು:

5. ಕುಮಾರ ಕೃಪ ಅತಿಥಿ ಗೃಹದಲ್ಲಿ ಸಾಕಷ್ಟು ಅಂಬಾಸಿಡರ್ ವಾಹನಗಳಿರುವುದು ಸರ್ಕಾರಕ್ಕ ತಿಳಿದಿದೆಯೇ:

6. ಹಾಗಿದ್ದಲ್ಲಿ, ಸಚಿವರ ಉಪಯೋಗಕ್ಕಾಗಿ ಖಾಸಗಿ ವ್ಯಕ್ತಿಗಳಿಂದ ಕಾಂಟೆಸ್ಸಾ ಮತ್ತು ಇತರ ಕಾರುಗಳನ್ನು ಬಾಡಿಗೆ ಪಡೆಯಲು ಕಾರಣಗಳೇನು:

7. ಕೇಂದ್ರ ಸಚಿವರುಗಳಿಗೆ ಅಂಬಾಸಿಡರ್ ವಾಹನಗಳನ್ನು ಮಾತ್ರ ಒದಗಿಸಲಾಗಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ ಎಲ್ಲಾ ಸಚಿವರುಗಳ ಉಪಯೋಗಕ್ಕಾಗಿ ಅಂಬಾಸಿಡರ್ ವಾಹನಗಳನ್ನು ಮಾತ್ರ ಒದಗಿಸುವ ಬಗ್ಗೆ ಸರ್ಕಾರವು ನೀತಿ ನಿರ್ಧಾರವನ್ನು ರೂಪಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1. ಹೌದು.

2. 9 ಕಾರುಗಳು

3. ದಿನಾಂಕ 20.1.93 ರಿಂದ ಪರ್ಯಾಯ ವ್ಯವಸ್ಥೆ ಮಾಡುವವರೆಗೂ.

4. ಬಾಡಿಗೆ ನೀಡಿರುವ ಸಂಸ್ಥೆಯಿಂದ ಬಾಡಿಗೆ ಕ್ಲೇಮ್ ಬಿಲ್‌ಗಳು ಇನ್ನೂ ಬಂದಿರುವುದಿಲ್ಲ.

5. ರಾಜ್ಯಕ್ಕೆ ಭೇಟಿ ನೀಡುವ ರಾಜ್ಯ ಅತಿಥಿಗಳು, ಗಣ್ಯ ವ್ಯಕ್ತಿಗಳು, ಕೇಂದ್ರ ಸರ್ಕಾರ ಹಾಗೂ ಇತರೆ ರಾಜ್ಯಗಳ ಹಿರಿಯ ಅಧಿಕಾರಿಗಳ ಉಪಯೋಗಕ್ಕೆ ಸಾಕಾಗುವಷ್ಟು ಅಂಬಾಸಿಡರ್ ಕಾರುಗಳು ಇರುವುದಿಲ್ಲ.

6. ಸಚಿವರುಗಳಿಗೆ ಅವರ ಕಾರ್ಯ ಗೌರವಕ್ಕೆ ಹಾಗೂ ಹೆಚ್ಚು ಇಂಧನ ಮಿತವ್ಯಯ ಸಾಧಿಸಲು ಅನುಕೂಲವಾಗುವಂತೆ ಕಾಂಟೆಸ್ಸಾ ಕ್ಲಾಸಿಕ್ ಕಾರುಗಳನ್ನೇ ಒದಗಿಸಲಾಗುತ್ತಿದ್ದು, ಸಚಿವ ಸಂಪುಟ ವಿಸ್ತರಣೆಯಲ್ಲಿ ಸಾಕಾಗುವಷ್ಟು ಕಾಂಟೆಸ್ಸಾ ಕ್ಲಾಸಿಕ್ ಕಾರುಗಳು ಕೂಡಲೇ ಇಲ್ಲವಾದ್ದರಿಂದ, ಕೇವಲ ತಾತ್ಕಾಲಿಕವಾಗಿ 9 ಕಾಂಟೆಸ್ಸಾ ಕ್ಲಾಸಿಕ್ ಕಾರುಗಳನ್ನು ಮಾತ್ರ ಬಾಡಿಗೆಗೆ ಪಡೆಯಲಾಗಿದೆ. ಉಳಿದ ಸಚಿವರುಗಳಿಗೆ ಸರ್ಕಾರದ ವಾಹನಗಳನ್ನೇ (ಕಾಂಟೆಸ್ಸಾ ಕ್ಲಾಸಿಕ್) ಒದಗಿಸಲಾಗಿದೆ.

7. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಕೂಡಿಗೆ ಕ್ರೀಡಾ ಶಾಲೆಯನ್ನು ಕುಶಾಲನಗರಕ್ಕೆ ಸ್ಥಳಾಂತರ ಮತ್ತು ಕುಶಾಲನಗರದಲ್ಲಿ ಸ್ಟೇಡಿಯಂ ನಿರ್ಮಾಣ.

546 (573): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕುಶಾಲನಗರದಲ್ಲಿ ಒಂದ ಕ್ರೀಡಾಂಗಣ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಗಮನದಲ್ಲಿದೆಯೇ:

ಆ. ಇದ್ದಲ್ಲಿ ಯಾವಾಗ ನಿರ್ಮಾಣ ಮಾಡಲಾಗುವುದು:

ಇ. ಕೊಡಿಗೆಯ ಕ್ರೀಡಾಶಾಲೆಯನ್ನು ಕುಶಾಲನಗರಕ್ಕೆ ಸ್ಥಳಾಂತರಿಸಲಾಗುವುದೇ:

ಈ. ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಳಾಂತರಿಸಲಾಗುವುದು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತ ಸಂಸ್ಕೃತಿ ಹಾಗೂ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾದ ನಿವೇಶನವನ್ನು ಗುರಿತಸಲಾಗಿದ್ದು, ನಿವೇಶನವು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ವರ್ಗಾಯಿಸಿದ ಕೂಡಲೇ ಕ್ರೀಡಾಂಗಣದ ನಿರ್ಮಾಣದ ಕಾರ್ಯ ಪ್ರಾರಂಭಿಸಲಾಗುವುದು.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಬಸ್ ಸ್ಟ್ಯಾಂಡ್.

547 (574): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಸರ್ಕಾರದಿಂದ ಬಸ್ ನಿಲ್ದಾಣವನ್ನು ನಿರ್ಮಿಸುವ ಸರ್ವೆ ಕಾರ್ಯ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ. ಬಂದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು:

ಇ. ಇದಕ್ಕೆ ಎಷ್ಟು ಹಣ ಮಂಜೂರು ಮಾಡಲಾಗಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಇಲ್ಲ.

ಆ. ನಿವೇಶನ ಸ್ವಾಧೀನಕ್ಕೆ ಪಡೆದ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹೆಂಡ ಮಾರಾಟದಿಂದ ಬಂದ ತೆರಿಗೆ.

548 (738): ಶ್ರೀ ಬಿ. ಹಂಪನಗೌಡ (ಸಿಂಧನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಹೆಂಡವನ್ನು ಮಾರಲು ಸರ್ಕಾರ ಪರವಾನಿಗೆ ಕೊಟ್ಟಿದೆ ಮತ್ತು